ಕರ್ನಾಟಕ ಸರ್ಕಾರ
(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು[ಕಾವಾ], ಸಿದ್ಧಾರ್ಥ ನಗರ, ಮೈಸೂರು

Chamarajendra Government College of Visual Arts[CAVA], Siddarthanagar, Mysuru.

## ಶಿಲ್ಪಕಲಾ ವಿಭಾಗ

## 2021-22ನೇ ಶೈಕ್ಷಣಿಕ ಸಾಲಿನ ಟೆರ್ರಾಕೊಟಾ ರಾಕು ಕಾರ್ಯಾಗಾರ

**ದಿನಾಂಕ: 17.12.2021 ರಿಂದ 30.12.2021 ಮತ್ತು 05.01.22 ರಿಂದ 07.01.2022**

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, ಮೈಸೂರು ಸಂಸ್ಥೆಯ ಶಿಲ್ಪಕಲಾ ವಿಭಾಗದಲ್ಲಿ ದಿನಾಂಕ: 17.12.2021 ರಿಂದ 30.12.2021 ರವರೆಗೆ [ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ], ದಿನಾಂಕ: 05.01.2022 ರಿಂದ 07.01.2022 ಮುಂದುವರೆಸಿ ಟೆರ್ರಾಕೊಟಾ ರಾಕು ಕಾರ್ಯಾಗಾರವನ್ನು ರಾಷ್ಟ್ರೀಯ ಮಟ್ಟದ ಕಲಾವಿದರಾದ ಶ್ರೀ ವಿಜಯ ಕುಮಾರ ರವರನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿಸಿ ಯಶಸ್ವಿಯಾಗಿ ನಡೆಸಲಾಗಿದೆ.

ಕಲಾವಿದರ ಮಾರ್ಗದರ್ಶನದಂತೆ ಮಣ್ಣಿನಲ್ಲಿ ಉಡಿಚಿರ ಮತ್ತು ಭತ್ತದ ಹೊಟ್ಟು ಮಿಶ್ರಣ ಮಾಡಿ ಚೆನ್ನಾಗಿ ಹದ ಮಾಡಿಕೊಂಡು ಕೃತಿ ರಚನೆ ಮಾಡಲಾಯಿತು. (10 ಇಂಚು ಎತ್ತರ) ಕಾಲೇಜಿನ ಆವರಣದಲ್ಲಿ ಇಟ್ಟಿಗೆಗಳಿಂದ ಒಲೆಯನ್ನು ನಿರ್ಮಿಸಿ, ಕಲಾಕೃತಿಗಳನ್ನು ಅದರಲ್ಲಿ ಇರಿಸಿ ಬೆಯಿಸಲಾಯಿತು. (ಸುಮಾರು 15 ತಾಸು. ರಾತ್ರಿ 1 ಗಂಟೆಯವರಿಗೆ) ಮರುದಿನ ಒಲೆಯಿಂದ ಕಲಾಕೃತಿಗಳನ್ನು ಹೊರ ತೆಗೆಯಲಾಯಿತು. 100 ಕಲಾಕೃತಿಗಳು ಕೆಂಪು ಬಣ್ಣಕ್ಕೆ ತಿರುಗಿದ್ದು ಇದಕ್ಕೆ ಟೆರ್ರಾಕೊಟಾ ಎಂಬುದಾಗಿ ಸಂಭೋದಿಸುತ್ತೇವೆ. ಮುಂದಿನ ಹಂತದಲ್ಲಿ ತಯಾರಾದ ಟೆರ್ರಾಕೊಟಾ ಕಲಾಕೃತಿಗಳಿಗೆ ಬಾಲ್ ಕ್ಲೇ, ಗ್ಲೇಸ್, ಹಾಗೂ ಆಕ್ಸೇಡ್ ಬಣ್ಣಗಳನ್ನು ಲೇಪಿಸಿ ಸೆರಾಮಿಕ್ ವುಲ್ ನಿಂದ ತಯಾರಿಸಿದ ಒಲೆಯಲ್ಲಿ ಇಡಲಾಯಿತು. ಗ್ಯಾಸ್ ಎಲ್.ಪಿ.ಜಿ. ಸಿಲೆಂಡರ್‌ನಿಂದ 950 ಡಿಗ್ರಿ ಶಾಖದೊಂದಿಗೆ ಕಲಾಕೃತಿಗಳನ್ನು ಬೆಯಿಸಲಾಯಿತು. ಕಾರ್ಯಾಗಾರದಲ್ಲಿ ತಯಾರಾದ ಕಲಾಕೃತಿಗಳನ್ನು ಒಂದು ವಾರದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.



ಕಲಾವಿದರ ಪರಿಚಯ : ಶ್ರೀ ವಿಜಯಕುಮಾರ

ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ] ಸಂಸ್ಥೆಯಿಂದ ಪದವಿ ಪಡೆದು ನಂತರ ಶಾಂತಿನಿಕೆತನ ಯೂನಿವೆರ್‌ಸಿಟಿ ಕಲ್ಕತ್ತಾ ಇಲ್ಲಿ ಸೆರಾಮಿಕ್ಸ್ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಸೆರಾಮಿಕ್ಸ್ ಮಾದ್ಯಮದಲ್ಲಿ ಅನುಭವಿ ಕಲಾವಿದರಾಗಿರುತ್ತಾರೆ. ಇವರು ಕಾವಾ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾಗಿದ್ದಾರೆ.




ಟೆರ್ರಾಕೊಟಾ ರಾಕು ಮಾದ್ಯಮದ ವಿವರಣೆ ನೀಡುತ್ತಿರುವ ಕಲಾವಿದರು.

ವಿಭಾಗದ ಮುಖ್ಯಸ್ಥರು ಕಲಾಕೃತಿ ರಚಿಸುತ್ತಿರುವುದು




ಮಣ್ಣಿನಿಂದ ಮಾಡಿದ ಕಲಾಕೃತಿಗಳನ್ನು ಬೆಯಿಸಲು ಒಲೆಯನ್ನು ನಿರ್ಮಿಸುತ್ತಿರುವುದು.



ತಯಾರಾದ ಟೆರ್ರಾಕೊಟಾ ಮಾಧ್ಯಮದ ಕಲಾಕೃತಿಗಳು




ಟೆರ್ರಾಕೊಟಾದ ಕಲಾಕೃತಿಗಳಿಗೆ ಬಾಲ್ ಕ್ಲೇ, ಆಕ್ಸಡ್, ಲೇಪನ ಮಾಡುತ್ತಿರುವ ಪ್ರಾತ್ಯಕಷಿಕೆ.



ರಾಕು ಮಾಧ್ಯಮದ ಬಗ್ಗೆ ಪ್ರಾತ್ಯಕಷಿಕೆ ನೀಡುತ್ತರುವುದು.




ಸೆರಾಮಿಕ್ ವುಲ್ ನಿಂದ ತಯಾರಾದ ಒಲೆಯಲ್ಲಿ ಟೆರ್ರಾಕೊಟಾ
ಕಲಾಕೃತಿಗಳನ್ನು ಸೇರಿಸಿ, 950 ಡೀಗ್ರಿಯಲ್ಲಿ ಬೆಯಿಸುತ್ತಿದ್ದಾರೆ.









ಕಲಾವಿದರೊಂದಿಗೆ ಛಾಯಾಚಿತ್ರ.

ತಯಾರಾದ ಟೆರ್ರಾಕೊಟಾ ಕಲಾಕೃತಿಗಳು.













ತಯಾರಾದ ರಾಕು ಮಾಧ್ಯಮದ ಕಲಾಕೃತಿಗಳು.













